# ದೂಧ್‌ಪತ್ರಿ

## ಹಿಮಾಲಯ ತಪ್ಪಲಿನಲ್ಲಿ ಹಾಲು–ನೀರಿನ ಕೊಳ್ಳ!

**ಹಿಮಾಲಯದ ಪಿರ್ ಪಂಜಾಲ್ ಪರ್ವತ ಶ್ರೇಣಿಗಳ ತಪ್ಪಲು 'ದೂಧ್ ಪತ್ರಿ', ಲೋಕದ ಜಂಜಡದಿಂದ ದೂರವುಳಿದ ಬೇರೆಯದೇ ಪ್ರಪಂಚದಂತೆ ಇದು ಕಾಣುತ್ತದೆ. ಬಂಡೆಗಳ ನಡುವೆ ಧುಮುಕುವ ಹಾಲ್ನೊರೆಯ ದೂಧ್ ಗಂಗಾ, ಪೈನ್ –ಫಿರ್ ಸಾಲು ಸಾಲು ಮರಗಳು ಈ ಕಣಿವೆಗೆ ಅನನ್ಯ ಚೆಲುವನ್ನು ಕರುಣಿಸಿವೆ.**

**■ ಕೆ.ಪಿ. ಸತ್ಯನಾರಾಯಣ**



ಕಳೆದ ಬಾರಿ ಅಮರನಾಥ್ ಪ್ರವಾಸ ಹೋಗಿದ್ದಾಗ ಜಮ್ಮು ಕಾಶ್ಮೀರದ ಶ್ರೀನಗರದಲ್ಲಿಯೂ ಕೆಲ ದಿನ ತಂಗಿದ್ದೆವು. ಅಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲಾ ನೋಡಿಯಾಯಿತು. ಅಮರನಾಥನ ದರ್ಶನವೂ ಅಂದುಕೊಂಡಿದ್ದಕ್ಕಿಂತ ಸಲೀಸಾಗಿ ಮುಗಿದುಹೋದುದರಿಂದ ಶ್ರೀನಗರದಲ್ಲಿ ಉಳಿದುಕೊಳ್ಳಲು ಒಂದು ದಿನದ ಹೆಚ್ಚಿನ ಬಿಡುವು ಸಿಕ್ಕಿತು.

ಇಷ್ಟು ದೂರ ಬಂದ ನಾವು, ಬೋನಸ್ ದಿನವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ನಿರ್ಧರಿಸಿ, ಹಿಂದೆ ನೋಡಿರದ ಸ್ಥಳಕ್ಕಾಗಿ ತಡಕಾಡಿದೆವು. ಶ್ರೀನಗರದಿಂದ ಸುಲಭವಾಗಿ ಭೇಟಿ ನೀಡಬಹುದಾದ ಸುಂದರ ಸ್ಥಳವೆಂದು ನಮೂದಿಸಿ, ಅಂತರ್ಜಾಲದಲ್ಲಿ ಹುಡುಕಾಡಿದಾಗ ಕಣ್ಣಿಗೆ ಬಿದ್ದದ್ದು 'ದೂಧ್ ಪತ್ರಿ' ಎನ್ನುವ ಹಸುರು ತಾಣ.

### 'ಭಾರತದ ಸ್ವಿಸ್'ಗೆ ನಮ್ಮ ಪಯಣ

ಜಮ್ಮು ಕಾಶ್ಮೀರ ರಾಜ್ಯದ ಬದ್ಗಾಂ ಜಿಲ್ಲೆಯ ಖಾನ್ ಸಾಹಿಬ್ ತಾಲ್ಲೂಕಿನ ಬೀರ್ವಾಹ್ ಪ್ರದೇಶದಲ್ಲಿರುವ ದೂಧ್ ಪತ್ರಿ (ಹಾಲಿನ ಕಣಿವೆ) ಸಮುದ್ರ ಮಟ್ಟದಿಂದ 2730 ಮೀಟರ್ (8960 ಅಡಿ) ಎತ್ತರದ ಪ್ರದೇಶ. ಶ್ರೀನಗರದಿಂದ 42 ಕಿ.ಮೀ. ದೂರದಲ್ಲಿದೆಯಾದರೂ, ಸುಮಾರು ಮೂರು ಸಾವಿರ ಅಡಿಗಳಷ್ಟು ಅಂಕುಡೊಂಕಿನ ಏರುಹಾದಿಯಲ್ಲಿ ಸಾಗಬೇಕು. ಚಿಕ್ಕ ವಾಹನದಲ್ಲಿಯಾದರೆ ಒಂದರಿಂದ ಒಂದೂವರೆ ಗಂಟೆಯ ಪ್ರಯಾಣ. ರಸ್ತೆ ಕಿರಿದು, ನಮ್ಮದು ದೊಡ್ಡ ಬಸ್ಸು. ನಡುವೆ ತಿಂಡಿಗೆಂದು ಒಂದೆಡೆ ನಿಲ್ಲಿಸಿದ್ದರು. ಹಾಗಾಗಿ ಒಟ್ಟು ಮೂರು ಗಂಟೆಯ ಸಮಯ ತೆಗೆದುಕೊಂಡೆವು.

ಹಲವಾರು ಮೈಲುಗಳುದ್ದಕ್ಕೂ ದಾರಿಯ ಪಕ್ಕದಲ್ಲಿ ನಮ್ಮ ಜೊತೆಗೇ ಹಳ್ಳವೊಂದು ಶುಭ್ರ ಸಲಿಲವಾಗಿ ಹರಿಯುತ್ತಿತ್ತು. ನಡುನಡುವೆ ಇದ್ದ ಬಂಡೆಗಳ ಮೇಲಿನಿಂದ ಹರಿದು ಬರುವಾಗ ಅಪ್ಪಟ ಬಿಳಿಧಾರೆಯಾಗಿ ಕಂಡುಬರುತ್ತಿದ್ದ ನೀರಿನ ನೋಟ ಅನುಪಮ ಎನ್ನುವಂತಿತ್ತು. ಆ ಹಳ್ಳದ ಬದಿಯಲ್ಲಿಯೇ ನಾವು ತಿಂಡಿ ತಿನ್ನಲು ನಿರ್ಧರಿಸಿದ್ದೆವು.

ದೂಧ್ ಗಂಗಾ ಎನ್ನುವುದಕ್ಕೆ ಅನ್ವರ್ಥವೆನ್ನುವಂತಿದ್ದ ಆ ಜಲದ ಹರಿವನ್ನು ನೋಡುತ್ತಾ ಅಲ್ಲಿಯೇ ಕುಳಿತಿರಲು ಬಯಕೆಯಾಗುತ್ತಿದ್ದರೂ ಒಲ್ಲದ ಮನಸ್ಸಿನಿಂದಲೇ ಮುಂದುವರೆದೆವು. ದೂಧ್ ಪತ್ರಿ ಇನ್ನೇನು ಹತ್ತಿರ ಬಂತು ಎನ್ನುವಾಗಲೇ ಹಸುರು ಹೊದ್ದ ಗುಡ್ಡಗಳೂ, ವಿಶಾಲ ಮೈದಾನಗಳೂ ಗೋಚರಿಸತೊಡಗಿದವು. ಸುತ್ತಮುತ್ತಲಿನ ಹಳ್ಳಿಗಳ ಜನರು ಅಲ್ಲಿ ತಮ್ಮ ಕುರಿ–ಕುದುರೆಗಳನ್ನು ಮೇಯಿಸುತ್ತಿದ್ದರು.

ಸೋನ್‌ಮಾರ್ಗ್, ಗುಲ್‌ಮಾರ್ಗ್, ಪೆಹಲ್‌ಗಾಂವ್ ಮುಂತಾದ ಪ್ರಸಿದ್ಧ ಸ್ಥಳಗಳಿಗೆ ಹೋಲಿಸಬಹುದಾದರೂ 'ದೂಧ್ ಪತ್ರಿ' ಅಷ್ಟೊಂದು ಪರಿಚಿತವಾದ ಪ್ರವಾಸಿ ಸ್ಥಳವಾಗಿಲ್ಲ. ಪ್ರವಾಸಿಗರ ಸಂಖ್ಯೆ ಸಾಕಷ್ಟಿತ್ತಾದರೂ ಗುಂಪು ಗದ್ದಲ ಇರಲಿಲ್ಲ. ಬಸ್ಸು ನಿಲ್ಲುತ್ತಿದ್ದಂತೆಯೇ ಸವಾರಿಗೆ ನಮ್ಮನ್ನು ಕರೆದೊಯ್ಯಲು

